ಎಂದು ಪ್ರಶ್ನೆ ಕೇಳಿದ್ದಾರೆ. ಇಲ್ಲವೆಂದೂ ಹೇಳಿದ್ದೇನೆ. ಎನ್.ಆರ್ ಐ. ಕಾಲೋನಿಯಲ್ಲಿ ಲೋಕಂಡ ವಾಲನಿಗೆ ಪರ್ಮಿಶನ್ ಕೊಟ್ಟಿಲ್ಲ. ನಾವು ಅವರಿಗೆ ಫೇವರ್ ಇಲ್ಲ. ಸರ್ವೆ ಮಾಡಿ ಎನ್. ಆರ್. ಐ. ಅಸೋಸಿಯೇಷನ್‌ಗೆ ಕಾಂಪೌಂಡ್ ಹಾಕಲಿಕ್ಕೆ ಬಿಲ್ಡಿಂಗ್ ಕಟ್ಟಲಿಕ್ಕೆ ಅನುಮತಿ ನೀಡಿದ್ದುದು ನಿಜ. ಆದರೆ ಲೋಕಂಡವಾಲನಿಗೆ ಅನುಮತಿಯನ್ನು ಕೊಟ್ಟಿಲ್ಲ. ಬಿ. ಡಿ. ಎ. ಅವರು ಮಾಡಿದಂತಹ ರೆಸಲ್ಯೂಷನ್ ಅನ್ನು ಕ್ಯಾನ್ಸಲ್ ಮಾಡಿದ್ದೇವೆ. ಮಾನ್ಯ ಮುಖ್ಯ ಮಂತ್ರಿಗಳು ಕೂಡ ಈ ಬಗ್ಗೆ ದಿನಾಂಕ ೧೫-೧-೧೯೮೯ ರಂದು ಹೇಳಿದ್ದಾರೆ. ಬಿ. ಡಿ. ಎ. ನವರು ಆದೇಶ ಕೊಟ್ಟರು ಕೂಡ ಅದನ್ನು ನಂತರ ಕ್ಯಾನ್ಸಲ್ ಮಾಡಿದ್ದೇವೆ. ಬಿ. ಡಿ. ಎ. ನವರು ಅಲ್ಲಿ ಬೋರ್ಡ್ ಹಾಕಿದ್ದಾರೆ. ನಮ್ಮ ವಾಚ್ ಅಂಡ್ ವಾರ್ಡ್ ಸ್ಟಾಫ್ ಅನ್ನು ಅಲ್ಲಿಗೆ ನೀಡಿದ್ದೇವೆ. ಅಲ್ಲಿ ವಾಚ್ ಅಂಡ್ ವಾರ್ಡ್ ಸ್ಟಾಫ್ ಇಲ್ಲ. ಅದಕ್ಕೋಸ್ಕರ ನಾವು ಕೊಟ್ಟಿದ್ದೇವೆ. ಅಲ್ಲಿ ಮೆಟೀರಿಯಲ್ಸ್ ಇಲ್ಲ. ಅವರು ಕಟ್ಟಿರುವ ಕಟ್ಟಡವನ್ನು ಡೆಪಾಲಿಷ್ ಮಾಡಬೇಕೇ ಅಥವಾ ಬಿ. ಡಿ. ಎ. ನವರೇ ಉಪಯೋಗ ಮಾಡಿಕೊಂಡು ಅಲ್ಲಿ ಸ್ಟೀಲ್, ಸಿಮೆಂಟ್ ಸ್ಟೋರೇಜ್‌ಗೆಂದಾ ಉಪಯೋಗ ಮಾಡಬೇಕೇ ಎಂದು ಕೇಳಿದ್ದಾರೆ. ಬಿ. ಡಿ. ಎ. ನೇ ಉಪಯೋಗ ಮಾಡಲೀ ಎಂದು ತಿಳಿಸಿದ್ದೇವೆ.

ಶ್ರೀ ಆರ್. ಎನ್. ನಾಯ್ಕ್.—ಲೋಖಂಡವಾಲ ಅಂದರೆ ಯಾರು ಯಾವ ರಾಜ್ಯದವರು ಅವರ ಹೆಸರಿನಲ್ಲಿ ಅಲ್ಲಿ ಬೋರ್ಡ್ ಹಾಕಿ ಅಲ್ಲಿ ಬಿಲ್ಡಿಂಗ್ ಕಟ್ಟುತ್ತಿರುವುದು ನಮಗೆ ಗೊತ್ತಿದೆಯೇ ಅಥವಾ ಗೊತ್ತಿಲ್ಲವೇ ? ಗೊತ್ತಿಲ್ಲವೆಂದು ಹೇಳುವುದಾದರೆ ನಾನು ಪ್ರಶ್ನೆ ಕೇಳುವುದಿಲ್ಲ. ಗೊತ್ತಿದೆ ಎಂದು ಹೇಳಿದರೆ ಅದರ ಪೂರ್ಣ ವಿವರವನ್ನು ಕೊಡಿ.

ಶ್ರೀ ಆರ್.ವಿ. ದೇಶಪಾಂಡೆ.—ನಮ್ಮ ರೆಕಾರ್ಡ್ಸ್ ಪ್ರಕಾರ ಲೋಖಂಡವಾಲಾನಿಗೆ ನಾವು ಅನುಮತಿಯನ್ನು ಕೊಟ್ಟಿಲ್ಲ. ಕಾಂಪೌಂಡ್ ವಾಲ್ ಹಾಕಲಿಕ್ಕೆ ಹೇಳಿಲ್ಲ.

ಶ್ರೀ ಆರ್. ಎನ್. ನಾಯ್ಕ್.—ಲೋಖಂಡವಾಲ ಎಂದು ಬೋರ್ಡ್ ಹಾಕಿ ಅಲ್ಲಿ ಕೆಲಸ ಮಾಡುತ್ತಿರುವ ವಿವರವೇನಾದರೂ ನಿಮ್ಮ ಸರಕಾರಕ್ಕೆ ಗೊತ್ತಿದೆಯೇ ಎಂದು ನಾನು ಪ್ರಶ್ನೆ ಕೇಳಿದ್ದುದು. ನಿಮಗೆ ಗೊತ್ತಿದ್ದರೆ ಹೌದು ಎಂದು ಹೇಳಿ. ಈ ರೀತಿ ಇಂಥವರು ಈ ರಾಜ್ಯದಲ್ಲಿ ಎಷ್ಟೋ ಜನರು ಮಾಡಿಕೊಂಡಿದ್ದಾರೆ. ಇದೇನೂ ದೊಡ್ಡ ವಿಚಾರವಲ್ಲ. ತಮ್ಮ ಕೃಪಾ ಕಟಾಕ್ಷದಲ್ಲಿ ಆಗಿರಬಹುದು. ಅದನ್ನು ನಾವು ತಪ್ಪು ಎಂದು ಹೇಳುವುದಿಲ್ಲ. ನಿಮ್ಮಗಳ ದಯೆ ಅಂಥವರ ಮೇಲೆಲ್ಲಾ ಇದೆ. ಸರ್ಕಾರದ ದಯೆ ಲೋಖಂಡವಾಲರಂಥ ದೊಡ್ಡವರ ಮೇಲೆಲ್ಲಾ ಇದೆ, ನನಗೆ ಏನು ಆಗಬೇಕು ಎಂದು ಹೇಳಿದರೆ ಈ ಲೋಖಂಡವಾಲ ಅಂಥ ಹೆಸರಿನಲ್ಲಿ ಬೆಂಗಳೂರಿನಲ್ಲಿ ಎಲ್ಲಿಯಾದರೂ ಸೈಟಿನಲ್ಲಿ ಬೋರ್ಡನ್ನು ಹಾಕಿ ಕೆಲಸವನ್ನು ಮಾಡುತ್ತಿರುವುದು ಸರ್ಕಾರದ ಗಮನದಲ್ಲಿದೆಯೇ ? ಅದು ಗೊತ್ತಿದ್ದರೆ ಗೊತ್ತು ಎಂದು ಹೇಳಿ, ಇಲ್ಲದ್ದಿದರೆ ಇಲ್ಲ ಎಂದು ಹೇಳಿ.

ಶ್ರೀ ಆರ್. ವಿ. ದೇಶ್‌ಪಾಂಡೆ.—ನಮ್ಮ ರೆಕಾರ್ಡ್ಸ್ ಪ್ರಕಾರ Sri Lokhandawala was the developer. ಇದರ ಮುಂದೆ ನಮಗೆ ಏನೂ ಗೊತ್ತಿಲ್ಲ.

ಅಧ್ಯಕ್ಷರು.—ಮುಂದಿನ ಪ್ರಶ್ನೆ ಶ್ರೀ ಮಹಮ್ಮದ್ ಲೈಕುದ್ದೀನ್ ಅವರದು.

ಶ್ರೀ ಎಂ. ಪಿ. ಪ್ರಕಾಶ್ (ಗ್ರಾಮೀಣಾಭಿವೃದ್ಧಿ ಸಚಿವರು).—ಮಾನ್ಯ ಅಧ್ಯಕ್ಷರೇ, ಇದಕ್ಕೆ ಉತ್ತರವನ್ನು ಇನ್ನೂ ಸ್ವಲ ಹೊತ್ತಿನಲ್ಲಿ ಹೇಳುತ್ತೇನೆ.

ಧಾರವಾಡ ನಗರದಲ್ಲಿ 1986 ರಿಂದ ನಿವೇಶನಗಳನ್ನು ಸಂಘ ಸಂಸ್ಥೆಗಳಿಗೆ ನೀಡಿರುವ ಬಗ್ಗೆ

೫೯೨. ಶ್ರೀ ಚಂದ್ರಕಾಂತ ಬೆಲ್ಲದ್(ಧಾರವಾಡ ನಗರ).—ಮಾನ್ಯ ವಸತಿ ಮತ್ತು ನಗರಾಭಿವೃದ್ಧಿ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ ?

ಅ) ಧಾರವಾಡ ನಗರದಲ್ಲಿ ೧೯೮೬ ರಿಂದ ನಿವೇಶನಗಳನ್ನು ಯಾವ ಯಾವ ಸಂಘ ಸಂಸ್ಥೆಗಳಿಗೆ ನೀಡಲಾಗಿದೆ,

(ವಿವರಗಳನ್ನೊದಗಿಸುವುದು),

ಆ) ಅದರಂತೆ ಮಹಾನಗರಸಭೆಯ ವ್ಯಾಪ್ತಿಯಲ್ಲಿನ ನಿವೇಶನಗಳನ್ನು ಸಂಘ ಸಂಸ್ಥೆಗಳಿಗಾಗಿ ನೀಡಲಾಗಿದೆಯೇ,

(ವಿವರಗಳನ್ನೊದಗಿಸುವುದು)

ಶ್ರೀ ಆರ್. ವಿ. ದೇಶಪಾಂಡೆ (ವಸತಿ ಮತ್ತು ನಗರಾಭಿವೃದ್ಧಿ ಸಚಿವರು).—

ಅ) ೩ ಸಂಘ ಸಂಸ್ಥೆಗಳಿಗೆ ನಿವೇಶನಗಳನ್ನು ನೀಡಲಾಗಿದೆ. (ವಿವರಗಳನ್ನು ಪ್ರತ್ಯೇಕ ಪಟ್ಟಿಯಲ್ಲಿ ಸೂಚಿಸಲಾಗಿದೆ).—

ಆ) ಹೌದು. (ವಿವರಗಳನ್ನು ಪ್ರತ್ಯೇಕ ಪಟ್ಟಿಯಲ್ಲಿ ಸೂಚಿಸಲಾಗಿದೆ)

ಸಂಘ–ಸಂಸ್ಥೆಗಳು

೧೯೮೬

೧)	ಕಾರ್ಯದರ್ಶಿ ನಾಟ್ಯಕಲಾ ಸಂಘ, ಕೆ. ಪಿ. ಸಿ. ಸರ್ಕಲ್,	೪೫೦ ಚೌ.ಪೂ.	೩ ವರ್ಷಗಳ ಭೂ ಬಾಡಿಗೆಯ ಮೇಲೆ
೨)	ಅಧ್ಯಕ್ಷರು, ಹಂಬ್ಬಳ್ಳಿ–ಧಾರವಾಡ ಮಹಾನಗರ ಸಭೆ ನೌಕರರ ಸೊಸೈಟಿ ಧಾರವಾಡ.	೬೨೫ ಚೌ.ಪೂ.	೩ ವರ್ಷಗಳ ಭೂ ಬಾಡಿಗೆಯ ಮೇಲೆ
೩)	ಮುಖ್ಯ ಕಾರ್ಯದರ್ಶಿ, ಜೈನ ಸಂಸ್ಥೆ ಧಾರವಾಡ.	೪೫೦ ಚೌ.ಪೂ.	೩ ವರ್ಷಗಳ ಭೂ ಬಾಡಿಗೆಯ ಮೇಲೆ

ಸಂಘ–ಸಂಸ್ಥೆಗಳು

೧೯೮೬ ('ಆ' ಅನುಬಂಧ)

೧)	ಕಾರ್ಯದರ್ಶಿ, ನಾಟ್ಯಕಲಾ ಸಂಘ, ಕೆ.ಪಿ.ಸಿ. ಸರ್ಕಲ್, ಧಾರವಾಡ.	೪೫೦ ಚೌ.ಪೂ.	೩ ವರ್ಷಗಳ ಭೂ ಬಾಡಿಗೆಯ ಮೇಲೆ

೧೯೮೭

೨)	ಅಧ್ಯಕ್ಷರು, ಹುಬ್ಬಳ್ಳಿ–ಧಾರವಾಡ ಮಹಾನಗರ ಸಭೆ ನೌಕರರ ಸೊಸೈಟಿ, ಧಾರವಾಡ	೬೨೫ ಚೌ.ಪೂ.	೩ ವರ್ಷಗಳ ಭೂ ಬಾಡಿಗೆಯ ಮೇಲೆ
೩)	ಮುಖ್ಯ ಕಾರ್ಯದರ್ಶಿ, ಜೈನ ಸಂಸ್ಥೆ, ಧಾರವಾಡ.	೪೫೦ ಚೌ.ಪೂ.	೩ ವರ್ಷಗಳ ಭೂ ಬಾಡಿಗೆಯ ಮೇಲೆ

ವ್ಯಕ್ತಿಗಳು 'ಆ' ಅನುಬಂಧ

೧೯೮೬

೧)	ಶ್ರೀ ಬಾಬು ಎಸ್. ಶಿವಳ್ಳಿ ಮದಾರಮಡ್ಡಿ, ಧಾರವಾಡ.	೧೫೦ ಚೌ.ಪೂ.	೩ ವರ್ಷಗಳ ಭೂ ಬಾಡಿಗೆಯ ಮೇಲೆ
೨)	ಶ್ರೀ ಬಸವರಾಜ ಈಶ್ವರಯ್ಯ ಗಣಾಚಾರಿ, ಸಪ್ತಾಪೂರ, ಧಾರವಾಡ.	೩೬೦ ಚೌ.ಪೂ.	೩ ವರ್ಷಗಳ ಭೂ ಬಾಡಿಗೆಯ ಮೇಲೆ
೩)	ಶ್ರೀ ವೆಂಕಪ್ಪ ಆಂತಯ್ಯ ಶೆಟ್ಟಿ, ಶ್ರೀವೇಣಿ ಹೋಟೆಲ್, ಸಪ್ತಾಪೂರ ಧಾರವಾಡ.	೫೬೦ ಚೌ.ಪೂ.	೩ ವರ್ಷಗಳ ಭೂ ಬಾಡಿಗೆಯ ಮೇಲೆ
೪)	ಶ್ರೀ ಪಿ.ಎಂ. ಮಂಹ್ಮದಲಿ, ಕೆ.ಪಿ.ಸಿ. ಬ್ಯಾಂಕ್ ಹತ್ತಿರ, ಧಾರವಾಡ	೧೫೦ ಚೌ.ಪೂ.	೩ ವರ್ಷಗಳ ಭೂ ಬಾಡಿಗೆಯ ಮೇಲೆ

೧೯೮೭

೫)	ಶ್ರೀಮತಿ ನೀಲವ್ವ ಕೋಂ. ಹನುಮಂತಪ್ಪ ಕೊರವರ, ಲಕ್ಷ್ಮಣಸಿಂಗ್ ಕೆರೆ, ಧಾರವಾಡ	೪೨೦ ಚೌ.ಪೂ.	೩ ವರ್ಷಗಳ ಭೂ ಬಾಡಿಗೆಯ ಮೇಲೆ
೬)	ಶ್ರೀ ಬಿ. ಡಿ. ಮುನವಳ್ಳಿ, ಮಣಕಿಲ್ಲಾ, ಧಾರವಾಡ.	೧೧೨೫ ಚೌ.ಪೂ.	೩ ವರ್ಷಗಳ ಭೂ ಬಾಡಿಗೆಯ ಮೇಲೆ
೭)	೧) ಶ್ರೀ ಶ್ಯಾಮರಾವ್ ೨) ಮಧುಕರ ತಂದಿ ಲಕ್ಷ್ಮಣರಾವ್ ಅಬೋಲಿ, ಟಿಕಾರೆ ರೋಡ್, ಧಾರವಾಡ.	೮೧೦ ಚೌ.ಪೂ.	೩ ವರ್ಷಗಳ ಭೂ ಬಾಡಿಯ ಮೇಲೆ
೮)	ಶ್ರೀ ಆಯ್. ಎಂ. ಸೈಫುದ್ದೀನ್ ಮಂಡಿಹಾಳ, ಧಾರವಾಡ	೧೫೦ ಚೌ.ಪೂ.	೩ ವರ್ಷಗಳ ಭೂ ಬಾಡಿಗೆಯ ಮೇಲೆ
೯)	ಶ್ರೀ ಸೋಮಶೇಖರ್ ಆಯ್, ಅಕಳವಾಡಿ. ಮಂಗಳವಾರಪೇಟೆ, ಧಾರವಾಡ.	೫೭೦ ಚೌ.ಪೂ.	೩ ವರ್ಷಗಳ ಭೂ ಬಾಡಿಗೆಯ ಮೇಲೆ

೧೯೮೮

೧೦)	ಶ್ರೀ ರಾಚಪ್ಪ ಶಿವಪುತ್ರಪ್ಪ ಅಮರಶೆಟ್ಟಿ, ಶಿವಾಜಿ ರೋಡ್ ಧಾರವಾಡ.	೨೨೫ ಚೌ.ಪೂ.	೩ ವರ್ಷಗಳ ಭೂ ಬಾಡಿಗೆಯ ಮೇಲೆ
೧೧)	ಶ್ರೀಮಲ್ಲಪ್ಪ ತಿಪ್ಪಣ್ಣ ಶಿರಹಟ್ಟಿ ಮೃತ್ಯುಂಜಯನಗರ, ಧಾರವಾಡ	೪೦೦ ಚೌ. ಪೂ.	೩ ವರ್ಷಗಳ ಭೂ ಬಾಡಿಗೆಯ ಮೇಲೆ

೧೯೮೯

೧೨)	೫೯ ಚುರಮುರಿಭಟ್ಟಿ ಜನರಿಗೆ (ಗೊಲ್ಲರಕಾಲನಿ ಮಂತ್ತು ಮಣಕಿಲ್ಲಾ) ಧಾರವಾಡ	೧೨/೨೫ ಅಳತೆ ಜಾಗ	೫ ವರ್ಷಗಳ ಭೂ ಬಾಡಿಗೆಯ ಮೇಲೆ

ಶ್ರೀ ಚಂದ್ರಕಾಂತ ಜಿ. ಬೆಲ್ಲದ್.—ಮಾನ್ಯ ಅಧ್ಯಕ್ಷರೇ, ಎಲ್ಲಾ ಸಂಘ ಸಂಸ್ಥೆಗಳಿಗೂ ನಿವೇಶನಗಳನ್ನು ಕೊಟ್ಟಿದ್ದಾರೆ. ಕಾರ್ಪೊರೇಷನ್‌ಗಳಲ್ಲೂ ಸಹಿತ ವೈಯಕ್ತಿಕವಾಗಿ ಅನೇಕ ಜನರಿಗೆ ನಿವೇಶನಗಳನ್ನು ಕೊಟ್ಟಿದ್ದಾರೆ ಎನ್ನುವುದು ಕೂಡಾ ತಿಳಿದುಬಂದಿದೆ. ನಿವೇಶನಗಳನ್ನು ಸಂಘ ಸಂಸ್ಥೆಗಳಿಗೆ ಕೊಟ್ಟರೆ ಅಡ್ಡಿಯೇನೂ ಇಲ್ಲ. ಇದರ ಬಗ್ಗೆ ಮಾನ್ಯ ಮಂತ್ರಿಗಳು ಏನು ಹೇಳುತ್ತಾರೆ?

ಶ್ರೀ ಆರ್. ವಿ. ದೇಶಪಾಂಡೆ.—ಮಾನ್ಯ ಅಧ್ಯಕ್ಷರೇ, ಈ ಕಾರ್ಪೊರೇಷನ್ ನಿರ್ಣಯ ತೆಗೆದು ಕೊಳ್ಳುವುದಕ್ಕಿಂತ ಮುಂಚೆ ಎಲ್ಲಾ ದೃಷ್ಟಿಯಿಂದಲೂ ವಿಚಾರ ಮಾಡಿ ನಿರ್ಣಯ ತೆಗೆದುಕೊಳ್ಳಬೇಕಾಗುತ್ತದೆ. ಆ ದೃಷ್ಟಿಯಿಂದಲೇ ವಿಚಾರ ಮಾಡಿ ಸಂಘ ಸಂಸ್ಥೆಗಳಿಗೆ ಕೊಟ್ಟಿದ್ದಾರೆ. ನಿವೇಶನಗಳ ಬಗ್ಗೆ ಈಗಾಗಲೇ ನಾವು ಎನ್‌ಕ್ವೈರಿ ಮಾಡಲಿಕ್ಕೆ ಆದೇಶವನ್ನು ಕೊಟ್ಟಿದ್ದೇವೆ, ಆ ಪ್ರಕಾರ ಎನ್‌ಕ್ವೈರಿ ರಿಪೋರ್ಟ್ ಬಂದಿದೆ. ಧಾರವಾಡ ಮತ್ತು ಹುಬ್ಬಳ್ಳಿಯಲ್ಲಿ ಸೈಟುಗಳನ್ನು ಯಾರಿಗೆ ಕೊಟ್ಟಿದ್ದಾರೆ, ಎಲ್ಲೆಲ್ಲಿ ಕಾಯ್ದೆ ಬದ್ಧವಾಗಿ ಕೊಟ್ಟಿಲ್ಲ ಎಂಬುದನ್ನು ನೋಡಿ ಅದರ ಬಗ್ಗೆ ಸರ್ಕಾರ ಕ್ರಮ ತೆಗದುಕೊಳ್ಳುತ್ತದೆ.

ಶ್ರೀ ಚಂದ್ರಕಾಂತ ಜಿ. ಬೆಲ್ಲದ್.—ಮಾನ್ಯ ಅಧ್ಯಕ್ಷರೇ, ಈಗಾಗಲೇ ಕಾರ್ಪೊರೇಷನ್‌ನಲ್ಲಿ ಬೇಡಿಕೆ ಸಲ್ಲಿಸಿರುವ ನಿವೇಶನಗಳ ಲಿಸ್ಟನ್ನು ಮತ್ತು ಕಂದಾಯ ಇಲಾಖೆಯಲ್ಲಿ ಬೇಡಿಕೆ ಸಲ್ಲಿಸಿರುವ ನಿವೇಶನಗಳ ಲಿಸ್ಟನ್ನು ಪೂರೈಸುತ್ತದೆಯೇ ಹೇಗೆ ಎಂದು ಮಾನ್ಯ ಮಂತ್ರಿಗಳಲ್ಲಿ ಕೇಳುತ್ತಿದ್ದೇನೆ.

ಶ್ರೀ ಆರ್. ವಿ. ದೇಶಪಾಂಡೆ.—ಮಾನ್ಯ ಅಧ್ಯಕ್ಷರೇ, ಅಲ್ಲಿ ನಿವೇಶನಗಳನ್ನು ಕೊಡುವುದಕ್ಕೆ ಡೆವಲಪ್‌ಮೆಂಟ್ ಅಥಾರಿಟಿಗೆ ವಹಿಸಿದ್ದೇವೆ. ಹುಬ್ಬಳ್ಳಿ ಮತ್ತು ಧಾರವಾಡದಲ್ಲೂ ಡೆವಲಪ್‌ಮೆಂಟ್ ಅಥಾರಿಟಿ

ಇದೆ. ಅವರು ಕ್ರಮ ತೆಗೆದುಕೊಳ್ಳುತ್ತಿದ್ದಾರೆ. ಅವರ ಕಛೇರಿಯಿಂದ ನಿವೇಶನಗಳನ್ನು ಕೊಡಿಸುತ್ತೇವೆ.

ಕೆ.ಜಿ.ಎಫ್. ನಲ್ಲಿ ಕುಡಿಯುವ ನೀರಿನ ಅಭಾವ

೬೧೮. ಶ್ರೀ ಟಿ. ಎಸ್. ಮಣಿ (ಕೆ.ಜಿ.ಎಫ್.).–ಮಾನ್ಯ ವಸತಿ ಮತ್ತು ನಗರಾಭಿವೃದ್ಧಿ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಕೆ.ಜಿ ಎಫ್‌ನಲ್ಲಿ ಕುಡಿಯುವ ನೀರಿನ ತೀವ್ರ ಅಭಾವ ಪರಿಸ್ಥಿತಿ ಇರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ ?

ಆ) ಹಾಗಿದ್ದಲ್ಲಿ ಸರ್ಕಾರ ತೆಗೆದುಕೊಂಡಿರುವ ಕ್ರಮಗಳು ?

ಇ) ಬೇತಮಂಗಲ ನೀರು ಸರಬರಾಜು ಕೇಂದ್ರದಲ್ಲಿ ಒಂದು ಡೀಸೆಲ್‌ನ ವಿದ್ಯುಚ್ಛಕ್ತಿ ಜನಕ ಯಂತ್ರವಿದ್ದರೂ ಸಹಿತ ಕಳೆದ ಹತ್ತು ತಿಂಗಳಿಂದ ಅದನ್ನು ಅಳವಡಿಸಿ ಕಾರ್ಯಾಚರಣೆ ಪಡಿಸಿಲ್ಲವೆಂಬುದು ಸರ್ಕಾರದ ಗಮನಕ್ಕೆ ಬಂದಿದೆಯೇ ?

ಈ) ಹಾಗಿದ್ದಲ್ಲಿ ಅದಕ್ಕೆ ಕಾರಣಗಳು ?

ಉ) ಉಲ್ಲೇಖಿತ ಡೀಸೆಲ್ ವಿದ್ಯುತ್ ಜನಕ ಯಂತ್ರವನ್ನು ನೀರು ಸರಬರಾಜಿಗೆ ಬೇಕಾದ ವಿದ್ಯುಚ್ಛಕ್ತಿಯ ಕೊರತೆಯನ್ನು ಹೋಗಲಾಡಿಸಲು ಯಾವಾಗ ಅಳವಡಿಸಲಾಗುವುದು ?

ಶ್ರೀ ಆರ್. ವಿ. ದೇಶಪಾಂಡೆ (ವಸತಿ ಮತ್ತು ನಗರಾಭಿವೃದ್ಧಿ ಸಚಿವರು) —

ಅ) ಹೌದು

ಆ) ನೀರು ಸರಬರಾಜು ಮಾಡಲು ವಿದ್ಯುಚ್ಛಕ್ತಿಯ ವೋಲ್ಟೇಜ್‌ನಲ್ಲಿ ಉಂಟಾಗಿರುವ ತೀವ್ರ ಏರಿಳಿತವು ಮತ್ತು ವಿದ್ಯುಚ್ಛಕ್ತಿ ಸರಬರಾಜು ಆಗಿಂದಾಗ್ಗೆ ಸ್ಥಗಿತಗೊಳ್ಳುವುದು ಕಾರಣವಾಗಿರುತ್ತದೆ.

ಇ) ಈ) ಮತ್ತು ಉ) ನೀರಸಂದ್ರದಲ್ಲಿ (ಹುಬ್ಬಳ್ಳಿ ಹತ್ತಿರ) ಇದ್ದಂತಹ ಹಳೇ ಡೀಸೆಲ್ ವಿದ್ಯುಚ್ಛಕ್ತಿ ಜನಕ ಯಂತ್ರವನ್ನು ಬೇತಮಂಗಲಕ್ಕೆ ಸ್ಥಳಾಂತರಿಸಲಾಗಿದೆ. ಈ ಯಂತ್ರವನ್ನು ಕಾರ್ಯಾಚರಣೆಗೆ ಸಿದ್ಧಗೊಳಿಸಲು ವ್ಯಾಪಕ ರಿಪೇರಿಗಾಗಿ ಸಾಕಷ್ಟು ಹಣ ಬೇಕಾಗುತ್ತದೆ. ಈ ಅಂಶಗಳನ್ನು ಗಮನದಲ್ಲಿಟ್ಟು ಕೆ.ಇ.ಬಿ. ಇಂದ ಸಮರ್ಪಕ ವಿದ್ಯುಚ್ಛಕ್ತಿ ವ್ಯವಸ್ಥೆ ಮಾಡುವುದು ಉಚಿತ ಇದರ ಬಗ್ಗೆ ಸೂಕ್ತ ಕ್ರಮ ಕೈಗೊಳ್ಳಲಾಗಿದೆ.

ಶ್ರೀ ಟಿ. ಎಸ್. ಮಣಿ —ಮಾನ್ಯ ಅಧ್ಯಕ್ಷರೇ, ಇಲ್ಲಿ ಜನರೇಟರ್ ಮಿಸ್ಟೇಕ್ ಇದೆ ಎಂದು ಉತ್ತರದಲ್ಲಿ ಹೇಳುತ್ತಾರೆ. ಅಲ್ಲಿ ಪಂಪ್ ಸೆಟ್ ರಿಪೇರಿ ಮಾಡುವುದಕ್ಕೆ ಸ್ಪೇರ್ ಪಾರ್ಟ್ಸ್ ಸಿಗುವುದಿಲ್ಲ ಎಂದು ನಮ್ಮ ಇಂಜಿನಿಯರ್ಸ್ ಹೇಳುತ್ತಾರೆ. ಕೆರೆಯಲ್ಲಿ ನೀರು ಇದೆ. ನೀರನ್ನು ಸಪ್ಲೈ ಮಾಡುವುದಕ್ಕೆ ಗವರ್ನಮೆಂಟ್‌ನಿಂದ ಪ್ರಾಪರ್ ಆಕ್ಷನ್ ತೆಗೆದುಕೊಳ್ಳಬೇಕು. ನೀರು ಇಲ್ಲದಿದ್ದರೆ ಪರವಾಗಿಲ್ಲ. ನೀರು ಇದ್ದರೂ ಸಹ ಸಪ್ಲೈ ಮಾಡಂವುದಿಲ್ಲ. ಆದ್ದರಿಂದ ಸರ್ಕಾರದವರು ಇದರ ಬಗ್ಗೆ ಸೂಕ್ತ ಕ್ರಮ ತೆಗೆದುಕೊಂಡು ಅಲ್ಲಿನ ಜನರಿಗೆ ನೀರನ್ನು ಕೊಡಬೇಕೆಂದು ಮಾನ್ಯ ಮಂತ್ರಿಗಳಲ್ಲಿ ಕೇಳಿಕೊಳ್ಳುತ್ತೇನೆ.

SRI R. V. DESHAPANDE.—Sir, I admit that there has been serious scarcity of drinking water in K.G.F. ಒಂದು ಕೋಟಿ ೨೫ ಲಕ್ಷ ರೂಪಾಯಿಗಳನ್ನು ಕೆ.ಜಿ.ಎಫ್. ಮುನಿಸಿಪಾಲಿಟಿಯವರು ವಾಟರ್ ಬೋರ್ಡ್‌ಗೆ ಕೊಡಬೇಕಾಗಿತ್ತು. ಇವ್ಹಾವರೂ ಸಹ ಬೋರ್‌ವೆಲ್ ಹಾಕಿ ನೀರನ್ನು ಕೊಡಂವುದಕ್ಕೆ ಪ್ರಯತ್ನ ಮಾಡಿದ್ದೇವೆ. ಡೀಸೆಲ್ ಜನರೇಟರ್ ಅನ್ನು ರಿಪೇರಿ ಮಾಡಿಸಬೇಕು. ಇದಕ್ಕೆ ಮೂರರಿಂದ ನಾಲ್ಕು ಲಕ್ಷ ರೂಪಾಯಿಗಳ ಹಣ ಬೇಕಾಗುತ್ತದೆ. ಮುನಿಸಿಪಾಲಿಟಿಯವರು ಹಣ ತುಂಬಬೇಕು. ನಾವು ಕೊಡುವ ಹಾಗಿಲ್ಲ. ಆದರೂ ಸಹ ಮಾನ್ಯ ಸದಸ್ಯರಿಗೆ ಆಶ್ವಾಸನೆ ಕೊಡುತ್ತೇನೆ, ಕುಡಿಯುವ ನೀರಿನ ಸಮಸ್ಯೆಯನ್ನು ಪರಿಹರಿಸುವುದಕ್ಕೆ ನಾವು ಪ್ರಯತ್ನ ಮಾಡುತ್ತೇವೆ.